ಒಬ್ಬರನ್ನೊಬ್ಬರ ಮುಖ ನೋಡಿದರು. ಅವರ ತುಟಿಗಳಲ್ಲಿ ಮೂಡಿದ್ದ ಅಪಹಾಸ್ಯದ ನಗು ಯಾಕೋ ಆ ವಾತಾವರಣಕ್ಕೆ ಹೊಂದಿಕೊಳ್ಳಲಿಲ್ಲ.

'ನೀವೇ ಒಂದು ವರ ಕೇಳಬಹುದಲ್ವಾ ಸಾರ್?' ಎಂದು ಮಗ ಹರ್ಬರ್ಟ್ ವೈಟ್ ಕೇಳಿದ.

ಸಾರ್ಜೆಂಟ್ ಮೇಜರ್ ಮೊರಿಸ್ ಹರ್ಬರ್ಟ್‌ನ ಮೇಲೆ ಒಬ್ಬ ಹಿರಿಯ, ತಲೆಹರಟೆಯಾಗಿರುವ ಕಿರಿಯನ ಮೇಲೆ ಬೀರುವಂತ ಒಂದು ತೀಕ್ಷ್ಣ ನೋಟ ಬೀರಿದರು.

'ನಾನು ಈ ಮೊದಲೇ ನನಗೆ ಬೇಕಾದ ವರಗಳನ್ನು ಪಡೆದುಕೊಂಡಿದ್ದೇನೆ' ಎಂದರು. ಯಾಕೋ ಅವರ ಮುಖ ಬಿಳುಚಿಕೊಳ್ಳತೊಡಗಿತು.

'ನೀವು ಹೇಳುತ್ತಿರುವುದು ನಿಜವೇ ಮೇಜರ್?' ಮಿಸೆಸ್ ವೈಟ್ ತಮ್ಮ ಹೆಣಿಗೆ ಕಡ್ಡಿಗಳನ್ನು ಪಕ್ಕಕಿಟ್ಟು ಕೇಳಿದರು.

'ನಾನು ಹೇಳುತ್ತಿರುವುದು ನಿಜವಾಗಲೂ ಸತ್ಯ ಮೇಡಂ.' ನಿರುತ್ಸಾಹದ ದನಿಯಲ್ಲಿ ಹೇಳಿದರು ಮೇಜರ್.

ಆಕೆಯ ಕುತೂಹಲ ಕೆರಳತೊಡಗಿತ್ತು. 'ನೀವಲ್ಲದೆ ಮತ್ಯಾರೂ ಇದರಿಂದ ವರಗಳನ್ನು ಪಡೆದುಕೊಂಡಿಲ್ಲವೆ?' ಆಕೆ ಕೇಳಿದಳು.

'ನನಗೆ ಗೊತ್ತಿದ್ದ ವ್ಯಕ್ತಿಯೊಬ್ಬರು ಮೂರೂ ವರಗಳನ್ನು ಪಡೆದುಕೊಂಡಿದ್ದರು. ಮೊದಲ ಎರಡು ವರಗಳೇನೆಂದು ನನಗೆ ಗೊತ್ತಿಲ್ಲ. ಮೂರನೆಯದು ನಾನು ಚೆನ್ನಾಗಿ ಬಲ್ಲೆ. ಅವರು ಸಾವನ್ನು ಕೇಳಿಕೊಂಡಿದ್ದರು! ಅವರ ನಂತರ ಈ ಕೋತಿಯ ಪಂಜ ನನ್ನ ಕೈಗೆ ಬಂತು.' ಅವರ ದನಿ ಎಷ್ಟೊಂದು ಗಂಭೀರವಾಗಿತ್ತೆಂದರೆ, ಕೆಲವು ಸಮಯ ಯಾರೂ ಮಾತನಾಡಲಿಲ್ಲ. ಅಲ್ಲಿ ದಟ್ಟ ಮೌನ ನೆಲೆಸಿತು.

'ನೀನು ನಿನ್ನ ಮೂರೂ ವರಗಳನ್ನು ಪಡೆದುಕೊಂಡಿದ್ದಲ್ಲಿ ನಿನಗೆ ಈ ಕೋತಿಯ ಪಂಜದ ಅಗತ್ಯವೇನು? ಅದನ್ನು ಯಾವ ಕಾರಣಕ್ಕಾಗಿ ಇನ್ನೂ ನಿನ್ನಲ್ಲಿಯೇ ಇಟ್ಟುಕೊಂಡಿದ್ದೀಯ?' ಮಿಸ್ಟರ್ ವೈಟ್ ಕೇಳಿದ.

'ಹೀಗೆಯೇ... ಯಾವುದೇ ಕಾರಣಗಳಿಲ್ಲ.' ಮೇಜರ್ ಹೇಳಿದರು.

'ನಿನಗೆ ಮತ್ತೆ ಮೂರು ವರಗಳನ್ನು ಕೇಳಬೇಕೆಂದರೆ ಮತ್ತೊಮ್ಮೆ ಕೇಳಬಹುದೇ?'

'ಖಂಡಿತವಾಗಿಯೂ ನನಗೆ ಗೊತ್ತಿಲ್ಲ! ಖಂಡಿತವಾಗಿಯೂ.' ಎನ್ನುತ್ತಾ ಮೇಜರ್ ಮೊರಿಸ್ ಆ ಕೋತಿಯ ಪಂಜವನ್ನು ತಮ್ಮ ಬೆರಳುಗಳಲ್ಲಿ ಹಿಡಿದು ಅಗ್ಗಿಷ್ಟಿಕೆಗೆ ಎಸೆದರು.

'ಸುಟ್ಟು ಹೋಗಲಿ ದರಿದ್ರದ್ದು.' ಸಿಟ್ಟಿನ ದನಿಯಲ್ಲಿ ಹೇಳಿದರು ಮೇಜರ್ ಮೊರಿಸ್. ಅವರ ಮುಖ ಇನ್ನೂ ಬಿಳುಚಿಕೊಂಡೇ ಇತ್ತು.

'ಮೊರಿಸ್!!' ಮಿಸ್ಟರ್ ವೈಟ್ ಚೀರಿದ. 'ನಿನಗೆ ಬೇಡದಿದ್ದರೆ ನನಗೆ ಕೊಡಬಹುದಿತ್ತು...' ಪಂಜವನ್ನು ಅಗ್ಗಿಷ್ಟಿಕೆಯಿಂದ ಹೊರಗೆಳೆಯುತ್ತಾ ಮಿಸ್ಟರ್ ವೈಟ್ ಹೇಳಿದ.

'ನಿನಗೆ ಅದು ಖಂಡಿತಾ ಬೇಡ ವೈಟ್' ಮೇಜರನ ದನಿಯಲ್ಲಿ ಆತಂಕವಿತ್ತು. 'ಅದೊಂದು ಅನಿಷ್ಟ ಪಂಜ. ಎಸೆ ಅದನ್ನು! ನೀನು ಅದನ್ನು ಇಟ್ಟುಕೊಂಡು ಮುಂದೆ ಜರುಗಬಹುದಾದ ಅನಾಹುತಗಳಿಗೆ ನಾನು ಜವಾಬ್ದಾರನಲ್ಲ! ಈಗಲೇ ಹೇಳುತ್ತಿದ್ದೇನೆ...'

ಮೇಜರನ ಎಚ್ಚರಿಕೆಯ ಮಾತುಗಳು ಮಿಸ್ಟರ್ ವೈಟನ ಮೇಲೆ ಯಾವುದೇ ಪ್ರಭಾವ ಬೀರಲಿಲ್ಲ. ಕೋತಿಯ ಪಂಜವನ್ನು ಸೂಕ್ಷ್ಮವಾಗಿ ಗಮನಿಸುತ್ತಾ, 'ಇದನ್ನು ಹೇಗೆ ಬಳಸುವುದು ಮೊರಿಸ್?' ಎಂದು ಕೇಳಿದ.